<u>ಅಸಲು ದಾವಾ ಸಂಖ್ಯೆ **- 85/2015**</u>
<u>ಪಿಡಬ್ಲೂ **- 1**</u>

<u>ದಿನಾಂಕ **07-08-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

**<u>ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎ. ದೊಡ್ಡಮನಿಯವರಿಂದ.</u>**

ನಾನು ಲಕ್ಷ್ಮಿಬಾಯಿ ಮತ್ತು ಅಶೋಕರವರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ಮಲ್ಲಮ್ಮನವರು ಈಗ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು 05-10 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ಹೂಡಿದ್ದೇನೆ ಎಂದರೆ ನಿಜ. ದಾವಾ ಸ್ವತ್ತು ಮೂಲತಃ ನನ್ನ ಮುತ್ತಜ್ಜ ಅಯ್ಯಪ್ಪರವರಿಗೆ ಸೇರಿದ್ದು ಎಂದರೆ ನಿಜ. ದಾವಾ ಸ್ವತ್ತನ್ನು ಹೊರತು ಪಡೆಸಿ ಬೇರೆ ಯಾವುದೇ ಆಸ್ತಿ ಅಯ್ಯಪ್ಪನವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಅಯ್ಯಪ್ಪನವರಿಗೆ ಸರ್ವೆ ನಂಬರ್ 2 ರಲ್ಲಿ 11-10 ಎಕರೆ ಆಸ್ತಿ ಇತ್ತು.

ನನ್ನ ಮುತ್ತಜ್ಜ ಅಯ್ಯಪ್ಪನವರಿಗೆ 6 ಜನ ಮಕ್ಕಳು ಎಂದರೆ ನಿಜ. ಅವರಲ್ಲಿ ಶರಣಪ್ಪ, ಶಿವಲಿಂಗಪ್ಪ ಮತ್ತು ಬಸವರಾಜರವರು 3 ಜನ ಗಂಡು ಮಕ್ಕಳು ಎಂದರೆ ನಿಜ. ಬಸ್ಸಮ್ಮ, ಶಾಮಲಾಬಾಯಿ ಮತ್ತು ಚನ್ನಮ್ಮರವರು 3 ಜನ ಹೆಣ್ಣು ಮಕ್ಕಳು ಎಂದರೆ ನಿಜ. ಆಲೂರಿನಲ್ಲಿ ನನ್ನ ತಂದೆಯ ಹೆಸರಿನಲ್ಲಿ ಒಂದು ಮನೆ ಇರುತ್ತದೆ ಎಂದರೆ ನಿಜ. ಸದರಿ ಮನೆಯನ್ನು ಈ ದಾವಾ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ನಿಜ. ನನ್ನ ತಂದೆ ಈರಣ್ಣರವರಿಗೆ ಇಬ್ಬರು ಮಕ್ಕಳು ಎಂದರೆ ನಿಜ. ನಾನು ಮತ್ತು 4 ನೇ ಪ್ರತಿವಾದಿ ಎಂದರೆ ನಿಜ. ಬಸ್ಸಮ್ಮ, ಶಾಮಲಾಬಾಯಿ ಮತ್ತು ಚನ್ನಮ್ಮರವರು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರು ಹೆಣ್ಣು ಮಕ್ಕಳಿರುತ್ತಾರೆ ಆದ್ದರಿಂದ ಪಿತ್ರಾರ್ಜಿತ ಆಸ್ತಿಯಲ್ಲಿ ಅವರಿಗೆ ಪಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜನ ತಮ್ಮ ಶಿವಲಿಂಗಪ್ಪನವರಿಗೆ 5 ಜನ ಮಕ್ಕಳು ಎಂದರೆ ನಿಜ. ಅವರ ಹೆಸರು ಅಯ್ಯಪ್ಪ, ಮಹಾಂತಪ್ಪ, ಮಲ್ಲಿಕಾರ್ಜುನ, ಸುರೇಶ ಮತ್ತು ಮಾಣಿಕಮ್ಮ ಎಂದರೆ ನಿಜ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಅವರಿಗೂ ಪಾಲು ಹೋಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹಾಗೂ ಶಿವಲಿಂಗಪ್ಪನ ಮಕ್ಕಳ ಹೆಸರಿನಲ್ಲಿ ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸುತ್ತೇನೆ.

ನನ್ನ ತಾಯಿ ಮಲ್ಲಮ್ಮನವರು ನನ್ನ ಜೊತೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ

<u>ಮರು ವಿಚಾರಣೆಃ ಇರುವುದಿಲ್ಲ.</u>
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

ದಿವಾನಿ ನ್ಯಾಯಾಧೀಶರು
ಜೇವರ್ಗಿ